# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1417 |
| **ಸದಸ್ಯರ ಹೆಸರು** | : | ಶ್ರೀ ಹೆಚ್.ಎಸ್.ಗೋಪಿನಾಥ್ |
| **ಉತ್ತರಿಸಬೇಕಾದ ದಿನಾಂಕ** | : | **18.12.2025** |
| **ಉತ್ತರಿಸಬೇಕಾದ ಸಚಿವರು** | : | ಉಪ ಮುಖ್ಯಮಂತ್ರಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **(ಅ)** | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಪಿ.ಆರ್.ಆರ್ ಯೋಜನೆಗೆ ಭೂಮಿ ನೀಡಿದ ರೈತರಿಗೆ ಪರಿಹಾರದ ದರ ನಿಗದಿಪಡಿಸಲಾಗಿದೆಯೇ; | ಹೌದು. |
| **(ಆ)** | ಭೂ-ಸ್ವಾಧೀನ ಕಾಯ್ದೆ 1894 ಮತ್ತು 2013ರ ಕಾಯ್ದೆಯ ಸಾಮ್ಯತೆಗೆ ಅನುಗುಣವಾಗಿ ಪರಿಹಾರ ನಿಗದಿಪಡಿಸಲಾಗುವುದೇ; 2013ರ ಕಾಯ್ದೆ ಪ್ರಕಾರವೇ ರೈತರಿಗೆ ಪರಿಹಾರ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು; ವಿಳಂಬ ನೀತಿ ಅನುಸರಿಸಲಾಗುತ್ತಿದೆಯೇ; (ಸಂಪೂರ್ಣ ಮಾಹಿತಿಯೊಂದಿಗೆ ವಿವರಣೆ ನೀಡುವುದು) | • ಮಾನ್ಯ ಸರ್ವೋಚ್ಚ ನ್ಯಾಯಾಲಯವು Miscellaneous Application No(s).1614-1616/2019 in Miscellaneous Application No(s).1316-1348/2019 in Civil Appeal No(s).7661-7663/2018ರಲ್ಲಿ ದಿನಾಂಕ:03/12/2020 ರಂದು ನೀಡಿರುವ ತೀರ್ಪಿನಲ್ಲಿ "The Right to fair compensation and Transparency in Land Acquisition and Rehabilitation and Resettlement Act, 2013 ಕಾಯ್ದೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧಿಸೂಚನೆಯಾಗಿರುವ ಜಮೀನುಗಳಿಗೆ ಅನ್ವಯಿಸುವುದಿಲ್ಲವೆಂದು ಆದೇಶಿಸಿರುವುದರಿಂದ ಸದರಿ 2013ರ ಕಾಯ್ದೆಯು ಪ್ರಾಧಿಕಾರಕ್ಕೆ ಅನ್ವಯವಾಗುವುದಿಲ್ಲ.<br>• ಬೆಂಗಳೂರು ಬ್ಯುಸಿನೆಸ್ ಕಾರಿಡಾರ್-1 (ಪಿ.ಆರ್.ಆರ್) ಯೋಜನೆಯಲ್ಲಿ ಒಳಗೊಂಡಿರುವ ಗ್ರಾಮಗಳ ಜಮೀನಿನ ಮಾರ್ಗಸೂಚಿ ದರಗಳು ವಿಭಿನ್ನವಾಗಿರುವುದರಿಂದ, ಭೂಸ್ವಾಧೀನಪಡಿಸಿಕೊಳ್ಳುವ ಜಮೀನಿನ ಭೂಮಾಲೀಕರುಗಳಿಗೆ ಆಯಾ ಗ್ರಾಮವಾರು ಮಾರ್ಗಸೂಚಿ ದರವನ್ನು ಗಮನದಲ್ಲಿರಿಸಿಕೊಂಡು ಸಂಧಾನ ಸೂತ್ರದ (ಸಂಧಾನಿತ ಮೊತ್ತ) ಮೂಲಕ ಭೂಸ್ವಾಧೀನ ಕಾಯ್ದೆ 1894ರಡಿ ನಿಗಧಿಪಡಿಸಬಹುದಾದ ಭೂಪರಿಹಾರ ಮೊತ್ತಕ್ಕಿಂತ ಹೆಚ್ಚಿನ ಪರಿಹಾರ ಮೊತ್ತವನ್ನು ನಿಗದಿಪಡಿಸಲು ಅಥವಾ ಭೂ ಮಾಲೀಕರು ಒಪ್ಪಿದಲ್ಲಿ ಟಿ.ಡಿ.ಆರ್ ನೀಡಲು ಸರ್ಕಾರದ ಆದೇಶ ಸಂಖ್ಯೆ: ನಅಇ 168 ಎಂಎನ್ಎಕ್ಸ್ 2024, ದಿನಾಂಕ: 21.09.2024ರಲ್ಲಿ ಆದೇಶಿಸಲಾಗಿರುತ್ತದೆ.<br>• ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ನಅಇ 168 ಎಂಎನ್ಎಕ್ಸ್ 2024, ದಿನಾಂಕ: 17-10-2025ರಲ್ಲಿ ಯೋಜನೆಗಾಗಿ 0-20 ಗುಂಟೆ ಮೇಲ್ಪಟ್ಟು ಭೂಮಿ ಕಳೆದುಕೊಳ್ಳುವ ಭೂಮಾಲೀಕರುಗಳಿಗೆ ನಗದು ಪರಿಹಾರ ನೀಡಲು ಅಥವಾ TDR ನೀಡಲು ಅಥವಾ ಭಾಗಶ: ಭೂಮಿ ಕಳೆದುಕೊಂಡವರಿಗೆ ಉಳಿಕೆ ಹೊಂದಿಕೊಂಡಿರುವ ಜಮೀನಿಗೆ FAR ನೀಡಲು ಅಥವಾ ರಸ್ತೆಗೆ ಹೊಂದಿಕೊಂಡಂತೆ 65:35 ಅನುಪಾತದಲ್ಲಿ ವಾಣಿಜ್ಯ ನಿವೇಶನಗಳನ್ನು ನೀಡಲು ಅಥವಾ ಡಾ:ಕೆ.ಶಿವರಾಮ ಕಾರಂತ ವಸತಿ ಬಡಾವಣೆ/BBC ಅಕ್ಕಪಕ್ಕದಲ್ಲಿ ನಿರ್ಮಿಸಲಾಗುವ ವಸತಿ ಬಡಾವಣೆಗಳಲ್ಲಿ ನಿವೇಶನದ ಮೌಲ್ಯವನ್ನು ಪರಿಗಣಿಸಿ ವಸತಿ ನಿವೇಶನಗಳನ್ನು ಪರಿಹಾರದ ರೂಪದಲ್ಲಿ ನೀಡಲು ಆಯ್ಕೆಗಳನ್ನು ನೀಡಲಾಗಿರುತ್ತದೆ. |

<table>
<tr><td>(ಇ)</td><td>ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣ ಸಂಬಂಧ ಬಿಡಿಎ ಸುಮಾರು 4 ಸಾವಿರ ರೈತರಿಗೆ ನೋಟೀಸ್ ನೀಡಿ, ಭೂಮಿ ಬಿಟ್ಟುಕೊಟ್ಟು ಪರಿಹಾರ ಪಡೆಯಲು ಒಪ್ಪಿಗೆ ಸೂಚಿಸುವಂತೆ ವಿನಂತಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)</td><td>ಸರ್ಕಾರದ ಆದೇಶ ಸಂಖ್ಯೆ: ನಅಇ/168/ಬೆಂಭೂಸ್ವಾ/2024(ಇ), ಬೆಂಗಳೂರು, ದಿನಾಂಕ:17.10.2025 ರನ್ವಯ, ಭೂ ಮಾಲೀಕರಿಗೆ ಪರಿಹಾರದ ಆಯ್ಕೆಗಳ ಕುರಿತು ಮಾಹಿತಿ ನೀಡಲಾಗುತ್ತಿದೆ.</td></tr>
<tr><td>(ಈ)</td><td>ಸದರಿ ನೋಟೀಸ್‌ಗೆ ರೈತರು ನೀಡಿರುವ ಉತ್ತರವೇನು; ಪಿ.ಆರ್.ಆರ್ ರಸ್ತೆ ಹಾದು ಹೋಗುವ ಮಾರ್ಗದಲ್ಲಿ ಪ್ರತಿ ಎಕರೆಗೆ ಹೊಸ ದರ ನೀಡಬೇಕು. ಇಲ್ಲವೇ ಯೋಜನೆ ಕೈಬಿಡಬೇಕು ಎಂದು ರೈತರು ನೋಟೀಸ್‌ಗೆ ಉತ್ತರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು.</td></tr>
<tr><td>(ಉ)</td><td>ಹಾಗಿದ್ದಲ್ಲಿ, ಸರ್ಕಾರ ರೈತರ ಪರವಾಗಿ ತೆಗೆದುಕೊಂಡಿರುವ ನಿರ್ಣಯಗಳೇನು; {ವಿವರ ನೀಡುವುದು}</td><td rowspan="2">• ಬೆಂಗಳೂರು ಬ್ಯುಸಿನೆಸ್ ಕಾರಿಡಾರ್-1 (ಪಿ.ಆರ್.ಆರ್) ಯೋಜನೆಯಲ್ಲಿ ಒಳಗೊಂಡಿರುವ ಗ್ರಾಮಗಳ ಜಮೀನಿನ ಮಾರ್ಗಸೂಚಿ ದರಗಳು ವಿಭಿನ್ನವಾಗಿರುವುದರಿಂದ, ಭೂಸ್ವಾಧೀನಪಡಿಸಿಕೊಳ್ಳುವ ಜಮೀನಿನ ಭೂಮಾಲೀಕರುಗಳಿಗೆ ಆಯಾ ಗ್ರಾಮವಾರು ಮಾರ್ಗಸೂಚಿ ದರವನ್ನು ಗಮನದಲ್ಲಿರಿಸಿಕೊಂಡು ಸಂಧಾನ ಸೂತ್ರದ (ಸಂಧಾನಿತ ಮೊತ್ತ) ಮೂಲಕ ಭೂಸ್ವಾಧೀನ ಕಾಯ್ದೆ 1894ರಡಿ ನಿಗದಿಪಡಿಸಬಹುದಾದ ಭೂಪರಿಹಾರ ಮೊತ್ತಕ್ಕಿಂತ ಹೆಚ್ಚಿನ ಪರಿಹಾರ ಮೊತ್ತವನ್ನು ನಿಗದಿಪಡಿಸಲು ಅಥವಾ ಭೂ ಮಾಲೀಕರು ಒಪ್ಪಿದಲ್ಲಿ ಟಿ.ಡಿ.ಆರ್ ನೀಡಲು ಕ್ರಮವಹಿಸಲಾಗುತ್ತಿದೆ.<br>• ಮುಂದುವರೆದು, ಒಪ್ಪಂದದ ಐ-ತೀರ್ಪಿನಡಿಯಲ್ಲಿ ಪರಿಹಾರ ಪಾವತಿಗೆ ಒಪ್ಪಿಗೆ ನೀಡುವ ಭೂ ಮಾಲೀಕರಿಗೆ ವಿವಿಧ ಪರಿಹಾರ ಆಯ್ಕೆಗಳನ್ನು ನೀಡಿ ದಿನಾಂಕ: 17.10.2025ರಂದು ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.</td></tr>
<tr><td>(ಊ)</td><td>ಇಲ್ಲಿ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನಕ್ಕೆ 155 ವರ್ಷಗಳ ಹಿಂದೆಯೇ ಅಧಿಸೂಚನೆ ಹೊರಡಿಸಿದ್ದು, ರೈತರು ಈ ಅಧಿಸೂಚಿತ ಭೂಮಿಯಲ್ಲಿ ಬೆಳೆಯನ್ನು ಬೆಳೆಯಲಾಗದೇ; ಯಾವುದೇ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗದೇ ಸಂಕಷ್ಟಕ್ಕೆ ಸಿಲುಕಿರುವುದರಿಂದ, ಸರ್ಕಾರ ಭೂ-ಸ್ವಾಧೀನ ಕಾಯ್ದೆ 1894ರ ಬದಲು 2013ರ ಕಾಯ್ದೆಯಂತೆ ರೈತರಿಗೆ ಪರಿಹಾರ ನೀಡಲು ಮುಂದಾಗುವುದೇ? (ವಿವರ ನೀಡುವುದು)</td></tr>
</table>

**ಸಂಖ್ಯೆ: ನಅಇ 678 ಬೆಂಭೂಸ್ವಾ 2025**

**(ಡಿ ಕೆ ಶಿವಕುಮಾರ್)**
**ಉಪ ಮುಖ್ಯಮಂತ್ರಿ**